ಎಲ್ಲರಿಗೂ ಅರ್ಥವಾಗಬೇಕಾಗಿದೆ. ಹಾಗೆಯೇ, ಕವಿಯ ವ್ಯಕ್ತಿತ್ವದಲ್ಲಿ ನಮಗೆ ಒಗ್ಗದ ಅಂಶಗಳನ್ನು ಒತ್ತಟ್ಟಿಗಿರಿಸಿ, ಅಂತಿಮವಾಗಿ ಕವಿಯ ಕಾವ್ಯದೆಡೆಗೆ ತಿರುಗಬೇಕಾಗಿದೆ. ಅವರ ಒಟ್ಟು ಬರವಣಿಗೆಯಲ್ಲಿ ಕನ್ನಡ ಸಾಂಸ್ಕೃತಿಕ–ಸಾಮಾಜಿಕ ಲೋಕಕ್ಕೆ, ಹೊಸ ತಲೆಮಾರುಗಳಿಗೆ ನಿಜಕ್ಕೂ ಬೇಕಾದದ್ದೇನು ಎಂದು ಹುಡುಕುವ ಕೆಲಸದಲ್ಲಿ ನಾವೆಲ್ಲ ತೊಡಗುವುದು ಕನ್ನಡ ಕಾವ್ಯ ಹಾಗೂ ಕರ್ನಾಟಕ ಸಂಸ್ಕೃತಿ ಎರಡರ ದೃಷ್ಟಿಯಿಂದಲೂ ಅತ್ಯಗತ್ಯ. ಯಾಕೆಂದರೆ, ಸಿದ್ಧಲಿಂಗಯ್ಯನವರ ಕಾವ್ಯ, 'ಊರು ಕೇರಿ', ಸದನದ ಭಾಷಣಗಳು ಇವೆಲ್ಲದರ ಮರು ಓದುಗಳಿಂದ ಕನ್ನಡ ಸಂಸ್ಕೃತಿ ಪಡೆಯಬೇಕಾದ ಅಂಶಗಳು ಹಾಗೂ ಅವುಗಳ ಮೂಲಕ ನಾವೆಲ್ಲ ತಲುಪಬೇಕಾದ ಗುರಿಗಳು ಬಹಳಷ್ಟಿವೆ.

ಕೊನೆಯ ಮಾತು: ತಮ್ಮ ಮಗಳ ಮದುವೆಯನ್ನು ಬೌದ್ಧ ರೀತಿಯಲ್ಲಿ ಮಾಡಿದ್ದ ಸಿದ್ಧಲಿಂಗಯ್ಯನವರ ಅಂತ್ಯಸಂಸ್ಕಾರವೂ ಬೌದ್ಧ ರೀತಿಯಲ್ಲೇ ಆಯಿತು. ಅವರ ಮನೆಯ ಪಡಸಾಲೆಯ ಗೋಡೆಯ ಮೇಲೆ, ಗೋಡೆಯ ಗೂಡುಗಳಲ್ಲಿ ಥರಥರದ ಬುದ್ಧ ಚಿತ್ರಗಳು, ಬುದ್ಧ ಮೂರ್ತಿಗಳಿದ್ದುದು ನೆನಪಾಗುತ್ತದೆ. ಅಷ್ಟೊಂದು ಬುದ್ಧರುಗಳ ಹಿನ್ನೆಲೆಯಲ್ಲಿ ವಿರಾಮವಾಗಿ, ಎಲ್ಲ ಕಹಿ ಮರೆತು, ತಮ್ಮ ಸಹಜ ತುಂಟತನವನ್ನು ಅದುಮಿಡಲಾಗದೆ ಕೂತ ಕವಿಯ ಚಿತ್ರ ನನ್ನೆದುರು ಸುಳಿಯುತ್ತದೆ. ದುಡಿಯುವ ಜನರ ಸಿಟ್ಟನ್ನು, ಶಕ್ತಿಯನ್ನು ಒಂದೇ ಗಳಿಗೆಯಲ್ಲಿ ತೋರಿಸಿಕೊಟ್ಟ ಅವರ 'ನೆನ್ನೆ ದಿನ ನನ್ನ ಜನ' ಹಾಡು ನನ್ನ ವಿದ್ಯಾರ್ಥಿ ದೆಸೆಯಲ್ಲಿ ಹುಟ್ಟಿಸಿದ ಮಿಂಚು ಮತ್ತೆ ಸುಳಿಯುತ್ತದೆ. ಆ ಕಾಲದಲ್ಲಿ ನಾವೆಲ್ಲ ಮಾಡಿದ ನಾಟಕದಲ್ಲಿ ಬಳಸಿದ ಅವರ 'ದೊಡ್ಡಗೌಡರ ಬಾಗಿಲಿಗೆ ನಮ್ಮ ಮೂಳೆಯ ತೋರಣ' ಹಾಗೂ 'ಕ್ವರುಗ್ನಿ, ಕ್ವನೆಗೊಂದ್ಲ ಕೂಗ್ನಿ, ಬಡ್ಡೀ ದುಡ್ನೋನ್ ಬಂಗ್ಲೆ ಕ್ಯಳ್ಗೆ ತಳಾದೀಗ್ ಸಿಕ್ಕಂಡಿರೋ ಮೂಳೆ... ನಾ ಕೂಗ್ನಿ, ಸಿಡಿತಿನಿ...' ಥರದ ಸಾಲುಗಳು ನಮ್ಮೆಲ್ಲರ ಪ್ರಜ್ಞೆಯನ್ನೇ ಬದಲಿಸಿದ ರೀತಿಗೆ ಕೃತಜ್ಞತೆ ಹುಟ್ಟುತ್ತದೆ. ಮೊನ್ನೆ ಜನ್ನಿ ಕಂಠ ಬಿರಿದು ಹಾಡಿದ 'ಮಹಾರಾಷ್ಟ್ರದ ಮಣ್ಣಿನಲ್ಲಿ ಮೂಡಿಬಂದ ಗುಡುಗು ಸಿಡಿಲೇ' ಎಂಬ ಕವಿಸಾಲು ನಿದ್ದೆ ಎಚ್ಚರಗಳಲ್ಲಿ ಮರುಕಳಿಸಿ ಮೂಡುತ್ತಿದ್ದ ಬಾಬಾಸಾಹೇಬರ ಚಿತ್ರ ಕಣ್ಣೆದುರು ಬರುತ್ತದೆ. ಇಂಥ ನೂರಾರು ಪರಿಣಾಮಕಾರಿ ಪ್ರತಿಮೆಗಳನ್ನು ಸೃಷ್ಟಿಸಿದ ಕವಿ ನನ್ನಂಥವರ ಬಗ್ಗೆ ಕಾಲಕಾಲಕ್ಕೆ ತೋರಿದ ಮಮತೆ ನೆನಪಾಗತೊಡಗಿ ಎದೆ ಭಾರವಾಗತೊಡಗುತ್ತದೆ. ಕರ್ನಾಟಕ ಸಂಸ್ಕೃತಿಯ ಜಾತ್ಯತೀತ ಯುಗದ ಒಂದು ಮಹಾಸ್ತಂಭವೇ ಸರಿದು ಹೋಯಿತು ಎಂಬ ದುಗುಡ ಮುತ್ತುತ್ತದೆ...

---

## ನಟರಾಜ್ ಹುಳಿಯಾರ್

ಕವಿ, ಕತೆಗಾರ, ಕಾದಂಬರಿಕಾರ, ವಿಮರ್ಶಕ, ಅಂಕಣಕಾರ, ನಾಟಕಕಾರ. 'ಮತ್ತೊಬ್ಬ ಸರ್ವಾಧಿಕಾರಿ', 'ಮಾಯಾ ಕಿನ್ನರಿ', 'ಬಸವಲಿಂಗಪ್ಪನವರು ಮತ್ತು ಡೇವಿಡ್ ಸಾಹೇಬರು' (ಕಥಾಸಂಗ್ರಹಗಳು), 'ಗಾಳಿ ಬೆಳಕು' (ಅಂಕಣ), 'ಶೇಕ್‌ಸ್ಪಿಯರ್ ಮನೆಗೆ ಬಂದ', 'ಮುಂದಣ ಕಥನ' (ನಾಟಕಗಳು), 'ರೂಪಕಗಳ ಸಾವು' (ಕವಿತೆ), 'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ' (ಸಂಶೋಧನೆ), 'ಇಂತಿ ನಮಸ್ಕಾರಗಳು' (ಸಾಂಸ್ಕೃತಿಕ ಕಥಾನಕ), 'ಕಾಮನ ಹುಣ್ಣಿಮೆ' (ಕಾದಂಬರಿ), 'ಪ್ರಜಾವಾಣಿ' ಅಂಕಣ ಬರಹಗಳ ಪುಸ್ತಕ 'ಕನ್ನಡಿ', 'ಶಾಂತವೇರಿ ಗೋಪಾಲಗೌಡ' (ಜೀವನ ಚರಿತ್ರೆ) ಅವರ ಕೆಲವು ಪುಸ್ತಕಗಳು. ಪಿ. ಲಂಕೇಶ್ ಅವರ ಆಯ್ದ ಬರಹಗಳ ಇಂಗ್ಲಿಷ್ ವಾಚಿಕೆ 'ಡಾರ್ಕ್ ಅರ್ತ್' ಇತ್ತೀಚೆಗೆ ಪ್ರಕಟವಾಗಿದೆ. ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ಗಾಂಧೀ ಅಧ್ಯಯನ ಕೇಂದ್ರದ ನಿರ್ದೇಶಕರು.